ಹೇಳುವುದು ಒಂದೇ. 'ನಿಮ್ಮ ಹೀರೊನಾ ನೀವು ನನ್ನ ಮೂಲಕ ಹೇಗೆ ತೋರಿಸಬೇಕು ಅಂತ ಡಿಸೈನ್ ಮಾಡಿದ್ದೀರಿ, ಅದನ್ನು ಹೇಳಿ' ಎಂದು. ಅವರ ನಿರೀಕ್ಷೆಗೆ ತಕ್ಕಂತೆ ನನ್ನಲ್ಲಿ ನಾನು ಬದಲಾವಣೆ ತಂದುಕೊಳ್ಳುತ್ತೇನೆ. ಮೊದಲ ಸಿನಿಮಾ ನಂತರ ಇದೇ ಬೆಸ್ಟ್ ಎಂದು ನನಗನ್ನಿಸಿದೆ.

◆ **ಯಾವ ಜಾನರ್‌ನ ಕಥೆ ನಿಮ್ಮನ್ನು ಹೆಚ್ಚು ಸೆಳೆಯುತ್ತದೆ?**

ನನಗೆ ಲವ್‌ಸ್ಟೋರಿ, ಫ್ಯಾಮಿಲಿ ಡ್ರಾಮಾ ಇಷ್ಟ. ಈ ರೀತಿಯ ಕಥೆಗಳ ಕಡೆ ಹೆಚ್ಚು ಗಮನ ನೀಡುತ್ತಿದ್ದೇನೆ. ನನ್ನ ಪರ್ಸನಾಲಿಟಿ ಹಾಗೂ ಮುಖಭಾವ ಮಾಸ್‌ಗೆ ಒಪ್ಪುವುದಿಲ್ಲ. ಅದು ನನಗೆ ಇಷ್ಟವೂ ಇಲ್ಲ. ಅದನ್ನು ಮಾಡಿದರೆ ಜನಕ್ಕೂ ಇಷ್ಟವಾಗಲ್ಲ. ಸುಮಾರು ಹೀರೊಗಳು ಅದಕ್ಕೆಂದು ಇದ್ದಾರೆ. ಆದರೆ ಲವರ್‌ಬಾಯ್ ಅಥವಾ ಫ್ಯಾಮಿಲಿ ಆಡಿಯನ್ಸ್ ಹೀರೊ ಜಾಗ ಕನ್ನಡ ಸಿನಿಮಾರಂಗದಲ್ಲಿ ಸ್ವಲ್ಪ ಖಾಲಿ ಇದೆ ಅನ್ನಿಸುತ್ತಿದೆ. ಈ ಜಾಗವನ್ನು ನಾನು ತೆಗೆದುಕೊಳ್ಳಬಲ್ಲೆ, ಆ ಸಾಮರ್ಥ್ಯ ನನಗಿದೆ, ಹಾಗೆ ನನ್ನ ಇಷ್ಟವೂ ಅದಾಗಿದೆ.

◆ **ನಟನೆಯ ಹುಚ್ಚು ಹತ್ತಿದ್ದು ಹೇಗೆ?**

ನನಗೂ ಈ ಪ್ರಶ್ನೆ ಕಾಡುತ್ತಲೇ ಇರುತ್ತದೆ. ಆಗಾಗ ಈ ಪ್ರಶ್ನೆಯನ್ನು ನಾನೂ ಕೇಳಿಕೊಳ್ಳುತ್ತಲೇ ಇರುತ್ತೇನೆ. ತಂದೆ ಕಡೆಯಾಗಲೀ, ತಾಯಿ ಕಡೆಯಾಗಲಿ ಯಾರೂ ಸಿನಿಮಾರಂಗದಲ್ಲಿಲ್ಲ. ನಾನೂ ಸಿನಿಮಾಗಳನ್ನು ಜಾಸ್ತಿ ನೋಡೋದೂ ಇಲ್ಲ. ಆದರೂ ಚಿಕ್ಕ ವಯಸ್ಸಿನಿಂದಲೂ ಸಿನಿಮಾದಲ್ಲಿ ಅಭಿನಯಿಸುವ ಹುಚ್ಚು ಸಿಕ್ಕಾಪಟ್ಟೆ ಇದೆ. ಹೇಗೆ, ಏಕೆ ಗೊತ್ತಿಲ್ಲ. ಇಲ್ಲಿ ನಾನು ದುಡ್ಡು ಮಾಡಲು ಬಂದಿಲ್ಲ, ಸಿನಿಮಾ ನನ್ನ ಪ್ಯಾಷನ್.

◆ **ನಿಮ್ಮ ಕನ್ನಡ ಕಲಿಕೆ ಬಗ್ಗೆ ಹೇಳಿ...**

ಈ ಮುನ್ನ ನಾನು ಕನ್ನಡವನ್ನು ಸ್ಪಷ್ಟವಾಗಿ ಮಾತಾಡುತ್ತಿರಲಿಲ್ಲ. ಆದರೆ ಯಾವಾಗ ನಟ ಆಗಬೇಕು ಎಂದು ತೀರ್ಮಾನ ಮಾಡಿದೆನೋ ಕನ್ನಡ ಕಲಿಯಲೇಬೇಕು ಎಂದುಕೊಂಡೆ. 8–9 ತಿಂಗಳು ಕನ್ನಡ ಕ್ಲಾಸ್‌ಗೆ ಹೋದೆ. ಭಾಷೆಯನ್ನು ತಿದ್ದಿಕೊಂಡೆ, ಬರೆಯೋದು, ಓದುವುದನ್ನು ಕಲಿತೆ. ಕನ್ನಡ ಹೆಚ್ಚು ಮಾತಾಡುವವರ ಜೊತೆ ಸೇರಿದೆ. ಮೊದಲ ಸಿನಿಮಾಗೆ ಡಬ್ಬಿಂಗ್ ನಾನು ಮಾಡಲಿಲ್ಲ. ಪ್ರಯತ್ನ ಮಾಡಿದ್ದೆ. ಆದರೆ ಸ್ಲ್ಯಾಂಗ್ ಬೇರೆ ಅನ್ನಿಸ್ತು. ಅದು ನನಗೆ ಇಷ್ಟ ಆಗಲಿಲ್ಲ. ಹೀಗಾಗಿ ಬೇರೆಯವರ ಕೈಲಿ ಮಾಡಿಸಿದೆ. ಈ ಬಾರಿ ನಾನೇ ಡಬ್ ಮಾಡುತ್ತಿದ್ದೇನೆ.

◆ **ಸಿನಿಮಾರಂಗದಲ್ಲಿ ನಿಮಗಿರುವ ಕನಸು?**

ನನ್ನ ಕನಸು ಒಂದೇ. ನಾನು ಸತ್ತ ಮೇಲೂ ನನ್ನನ್ನು ಸಿನಿಮಾರಂಗ, ಜನರು ನೆನಪಿಸಿಕೊಳ್ಳಬೇಕು. ನಾನು ಎಷ್ಟು ಸಿನಿಮಾ ಮಾಡುತ್ತೇನೋ ಗೊತ್ತಿಲ್ಲ. ತುಂಬಾ ದೊಡ್ಡ ನಟ ಆಗಬೇಕು ಎಂಬ ಆಸೆಯೂ ಇಲ್ಲ. ಆದರೆ ನನ್ನನ್ನು ನೆನಪಿಸಿಕೊಳ್ಳುವಂತೆ ನಾನಿರಬೇಕು ಅಷ್ಟೆ.

◆ **ನಿಮ್ಮ ಮುಂದಿನ ಸಿನಿಮಾಗಳು?**

ಸದ್ಯ ಅನಿಲ್ ಕುಮಾರ್ ಅವರ ಜೊತೆ ಎರಡನೇ ಸಿನಿಮಾ ಮಾಡುತ್ತಿದ್ದೇನೆ. ಶೀಘ್ರವೇ ಟೈಟಲ್ ಲಾಂಚ್ ಮಾಡುತ್ತೇವೆ. ಈ ವರ್ಷದ ಒಳಗೆ ಸಿನಿಮಾ ಬಿಡುಗಡೆಯಾಗುವ ನಿರೀಕ್ಷೆಯಿದೆ. ಜೊತೆಗೆ ಬ್ಯಾಕ್ ಟು ಬ್ಯಾಕ್ ಮೂರು ಸಿನಿಮಾಗಳು ಇವೆ.

ಪ್ರತಿಕ್ರಿಯಿಸಿ: feedback@sudha.co.in





# ಸಪ್ತಮಿ ಲೇಹ್ ಲಹರಿ

ಯುವ ರಾಜ್‌ಕುಮಾರ್ ನಟನೆಯ, 'ಯುವ' ಸಿನಿಮಾದ ನಾಯಕನಟಿ ಸಪ್ತಮಿ ಗೌಡ, ಲೇಹ್‌ನಲ್ಲಿನ ಚಿತ್ರೀಕರಣದ ಅನುಭವಗಳನ್ನು ಹಂಚಿಕೊಂಡಿದ್ದಾರೆ.

ರೊಮ್ಯಾಂಟಿಕ್ ಹಾಡಿಗೆ ಹೆಜ್ಜೆ ಹಾಕಿರುವ ನಟಿ ಸಪ್ತಮಿ ಗೌಡ, ಲೇಹ್‌ನಲ್ಲಿ ಥರಗುಟ್ಟುವ ಚಳಿ, ಹಿಮದ ನಡುವಿನ ಶೂಟಿಂಗ್ ಅನುಭವವನ್ನು ಹಂಚಿಕೊಂಡಿದ್ದಾರೆ.

'ಕಳೆದ ನವೆಂಬರ್‌ನಲ್ಲಿ ಲೇಹ್‌ಗೆ ಹೋಗಿದ್ದೆವು. ಚಳಿ ಮಿತಿ ಮೀರುವ ಕಾಲ. ಲೇಹ್‌ನಲ್ಲಿ ಕೇಳಬೇಕೆ? ಈ ಸಮಯದಲ್ಲಿ ಎಲ್ಲಾ ಹೋಟೆಲ್‌ಗಳು ಮುಚ್ಚಿದ್ದವು. ನಮಗಾಗಿ ಮಾತ್ರ ಒಂದು ಹೋಟೆಲನ್ನು ತೆರೆದಿರಲಾಗಿತ್ತು. ಹೀಟರ್ ಹಾಗೂ ವಾಟರ್ ಗೀಸರ್‌ಗಳನ್ನು ನಮಗೆಂದೇ ವ್ಯವಸ್ಥೆ ಮಾಡಲಾಗಿತ್ತು. ನಾನು ಉಳಿದುಕೊಂಡಿದ್ದ ಕೋಣೆ ಪೂರ್ತಿ ಫ್ರೀಜ್ ಆಗಿತ್ತು. ಆ ಚಳಿಯಲ್ಲಿ ಕೆಟಲ್‌ಗಳಲ್ಲಿ ಕಾದ ನೀರಿನಿಂದ ಕೂದಲನ್ನು ತೊಳೆದುಕೊಳ್ಳಬೇಕಿತ್ತು' ಎಂದಿದ್ದಾರೆ.

'ತೆರೆದ ಮೈದಾನದಂಥ ಪ್ರದೇಶದಲ್ಲಿ ಶೂಟಿಂಗ್ ಮಾಡುತ್ತಿದ್ದೆವು. ಕಲ್ಲುಗಳು ತುಂಬಿದ್ದವು. ನಮ್ಮ ಮೂಳೆಗಳೋ ಥಂಡಿಗೆ ಥರಗುಟ್ಟಿದಂತಾಗುತ್ತಿದ್ದವು. ನಾನು ಹಾಡಿಗೆಂದು ಗೌನ್‌ಗಳನ್ನು ಧರಿಸಿದ್ದೆ. ಹೀಗಾಗಿ ಥರ್ಮಲ್ ತೊಟ್ಟುಕೊಳ್ಳಲು ಆಗಲಿಲ್ಲ. ನಗಬೇಕೋ ಅಳಬೇಕೋ ಗೊತ್ತಾಗುತ್ತಿರಲಿಲ್ಲ' ಎನ್ನುತ್ತಲೇ ನಗು ಹರಿಸಿದ್ದಾರೆ.

ಇನ್ನೂ ಮುಂದುವರೆದು, 'ನಮ್ಮೊಂದಿಗಿದ್ದ ಕೆಲವರಿಗೆ 'ಆಲ್ಟಿಟ್ಯೂಡ್ ಸಿಕ್‌ನೆಸ್' (ಎತ್ತರದ ಪ್ರದೇಶದಲ್ಲಿ ಕಾಡುವ ಆರೋಗ್ಯ ಸಮಸ್ಯೆ) ಕಾಡುತ್ತಿತ್ತು. ಮತ್ತೆ ಮತ್ತೆ ಮೇಕಪ್ ಮಾಡಿಕೊಳ್ಳುತ್ತಲೇ ಇರಬೇಕಿತ್ತು. ಬೆಳಿಗ್ಗೆ 5 ಗಂಟೆಗೆ ಶೂಟಿಂಗ್ ಆರಂಭಿಸಿದರೆ, ಸಂಜೆ 4ರವರೆಗೆ ದಿನದ ಬೆಳಕಿನಲ್ಲೇ ಶೂಟಿಂಗ್ ಮಾಡಿಕೊಳ್ಳುತ್ತಿದ್ದೆವು. ಇಷ್ಟು ಸವಾಲುಗಳ ಮಧ್ಯೆಯೂ ಚಿತ್ರೀಕರಣದ ಜೊತೆಜೊತೆಗೆ ಖುಷಿಯಿಂದ ಕಾಲ ಕಳೆದೆವು' ಎಂದಿದ್ದಾರೆ ಸಪ್ತಮಿ. 'ಯುವ' ಸಿನಿಮಾ ಇದೇ ಮಾರ್ಚ್ 29ರಂದು ತೆರೆಕಾಣುತ್ತಿದೆ.

■